# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ | : | 2751 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 28/03/2022. |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರೌಢಶಾಲಾ ಹಂತದಲ್ಲಿ ಜಾರಿಗೊಳಿಸುವಲ್ಲಿ ರೂಪಿಸಲಾಗಿರುವ ರೂಪುರೇಷೆಗಳೇನು; (ಪೂರ್ಣ ವಿವರ ನೀಡುವುದು) | ಪ್ರೌಢ ಶಾಲಾ ಹಂತಕ್ಕಾಗಿ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಶಿಫಾರಸ್ಸುಗಳು ಈ ಕೆಳಕಂಡಂತಿರುತ್ತದೆ.<br>1. ಶಾಲೆ ಬಿಟ್ಟು ಹೋಗುವವರ (Dropout) ಸಂಖ್ಯೆ ಕಡಿಮೆ ಮಾಡುವುದು ಹಾಗೂ ಎಲ್ಲಾ ಹಂತಗಳಲ್ಲಿ ಸಾರ್ವತ್ರಿಕ ಶಿಕ್ಷಣ ದೊರೆಯುವಂತೆ ಖಾತರಿಪಡಿಸಿಕೊಳ್ಳುವುದು.<br>2. ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಬೋಧನಾ ಕ್ರಮ–ಕಲಿಕೆ ಒಂದು ಸಮಗ್ರವಾದ, ಸಂಕಲಿತವಾದ ಆನಂದದಾಯಕವಾದ ಮತ್ತು ಕ್ರಿಯಾಶೀಲವಾದ ಚಟುವಟಿಕೆಯಾಗುವಂತೆ ಕ್ರಮ ವಹಿಸುವುದು.<br>3. ತರಗತಿಗಳಲ್ಲಿ ಸಮರ್ಪಕವಾದ ಬೋಧನಾ ಪ್ರಕ್ರಿಯೆ ನಿರ್ವಹಿಸಲು ಶಿಕ್ಷಕರಿಗೆ ವೃತ್ತಿಪರ ತರಬೇತಿ ನೀಡುವುದು.<br>4. ಎಲ್ಲಾರಿಗೂ ಸಮಾನತೆ ಆಧಾರಿತ ಮತ್ತು ಸಮಾವರ್ತನೆಯಿಂದ ಕೂಡಿದ ಶಿಕ್ಷಣ ನೀಡುವುದು.<br>5. ವಿದ್ಯಾರ್ಥಿಗಳಿಗೆ, ಅಧ್ಯಯನ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ಹೆಚ್ಚಿನ ಮುಕ್ತತೆಯನ್ನು ಕಲ್ಪಿಸಿಕೊಡಲಾಗುವುದು. ಇವುಗಳಲ್ಲಿ ದೈಹಿಕ ಶಿಕ್ಷಣ, ಕಲೆ ಮತ್ತು ಕರಕುಶಲ ಹಾಗೂ ಔದ್ಯೋಗಿಕ ಕೌಶಲ್ಯಗಳು ಕೂಡ ಸೇರಿರುತ್ತವೆ.<br>6. ಶಾಲೆಗಳಿಗೆ ಸಂಕೀರ್ಣಗಳ/ಸಮುಚ್ಚಯಗಳ ಮೂಲಕ ಸಮರ್ಥವಾದ ಸಂಪನ್ಮೂಲ ಯೋಜನೆ ಮತ್ತು ಸಮರ್ಥ ಆಡಳಿತ ನಿರ್ವಹಣೆ ಮಾಡುವುದು.<br>7. ಶಾಲಾ ಶಿಕ್ಷಣಕ್ಕಾಗಿ ಮಾನಕಗಳನ್ನು ರೂಪಿಸುವುದು ಮತ್ತು ಮೌಲ್ಯಾಂಕನ ವ್ಯವಸ್ಥೆ ಮಾಡುವುದು.<br>8. ತರಗತಿ ಪ್ರಕ್ರಿಯೆಯಲ್ಲಿ ತಂತ್ರಜ್ಞಾನವನ್ನು ಅಳವಡಿಸಿ ಗುಣಮಟ್ಟದ ಕಲಿಕೆ ಆಗುವಂತೆ ಖಾತರಿಪಡಿಸಿಕೊಳ್ಳುವುದು.<br>9. ಪ್ರೌಢ ಹಂತದ ವಿದ್ಯಾರ್ಥಿಗಳಿಗೆ ವೃತ್ತಿಪರ ಮಾರ್ಗದರ್ಶನ ನೀಡುವುದು. |

| | | |
|---|---|---|
| ಆ) | ಸದರಿ ನೀತಿಯ ಅನುಸಾರ 9, 10 ಮತ್ತು 11ನೇ ತರಗತಿಗಳಿಗೆ ಶಿಕ್ಷಕರನ್ನು ನೇಮಿಸುವಾಗ ಅನುಸರಿಸಲಾಗುವ ಮಾನದಂಡಗಳೇನು; (ವಿವರ ನೀಡುವುದು) | ಸದರಿ ನೀತಿಯ ಅನುಸಾರ ಶಿಕ್ಷಕರನ್ನು ನೇಮಿಸುವಾಗ ಕಟ್ಟುನಿಟ್ಟಿನ ಪಾರದರ್ಶಕ ಕ್ರಮಗಳನ್ನು ರೂಪಿಸಿ ಅರ್ಹ ಉತ್ತಮ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳಲು ಕ್ರಮ ವಹಿಸಬೇಕಾಗಿರುತ್ತದೆ |
| ಇ) | ಸದರಿ ಶಿಕ್ಷಕರಿಗೆ ನಿಗದಿಗೊಳಿಸಲಾದ ವಿದ್ಯಾರ್ಹತೆ ಮೂಲ ವೇತನ ಹಾಗೂ ಯಾವ ವೇತನ ಶ್ರೇಣಿಯಲ್ಲಿ ವೇತನವನ್ನು ನೀಡಲಾಗುವುದು; | ನೀತಿಯಲ್ಲಿ ಈ ಬಗ್ಗೆ ನಿರ್ದಿಷ್ಟ ಸೂಚನೆಗಳು ಇರುವುದಿಲ್ಲ. |
| ಈ) | ಇವರ ಮುಂಬಡ್ತಿಗೆ ರೂಪಿಸಲಾಗಿರುವ ನಿಯಮಗಳೇನು; | ನೀತಿಯಲ್ಲಿ ಈ ಬಗ್ಗೆ ನಿರ್ದಿಷ್ಟ ಸೂಚನೆಗಳು ಇರುವುದಿಲ್ಲ. |
| ಉ) | ಸದರಿ ನೀತಿಯ ಅನುಸಾರ ಪ್ರೌಢಶಾಲೆಗಳಿಗೆ ಶಿಕ್ಷಕರ ಕೊರತೆ ನೀಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? | ಶಿಕ್ಷಕರುಗಳ ನೇಮಕಾತಿಯನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು. |

ಸಂಖ್ಯೆ: ಇಪಿ 62 ಎಲ್‌ಬಿಪಿ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು